ಇ) ಜಂಟಿ ಯೋಜನೆ ಟೆಂಡರ್‌ಗೆ ಸರ್ಕಾರವು ಅನುಮೋದನೆ ನೀಡಿದ್ದು, ಈ ಜಾಗವು ನಗರ ಪಾಲಿಕೆಯ ಸರ್ಕಾರಕ್ಕೆ ನೀಡಬೇಕಾಗಿರುವ ಬೆಲೆಯನ್ನು ನಿರ್ಧರಿಸಲು ಒಂದು ಸಮಿತಿಯನ್ನು ನೇಮಿಸಿದೆ. ಹಾಗೂ ಈ ನಿರ್ಧಾರವು ಅಂತಿಮಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಈ) ಹೌದು.

ಉ) ಈ ಹಿಂದೆ ಮಹಾನಗರ ಪಾಲಿಕೆಗೆ ಈ ಜಾಗವನ್ನು ಕಸ ಕೂಡಿಸಲು ಕೊಟ್ಟಾಗ ಒತ್ತುವರಿ ಆಗಿತ್ತು. ಆದರೆ ಈಗ ಆ ಜಾಗದಲ್ಲಿ ಜಂಟಿ ವಲಯದಲ್ಲಿ ವಾಣಿಜ್ಯ ಮಳಿಗೆಯನ್ನು ತೆಗೆದುಕೊಳ್ಳುವಾಗ ತಡೆಗೊಡೆಯನ್ನು ಹಾಕಲು ಕ್ರಮ ಕೈಗೊಳ್ಳಲಾಗುವುದು.

ಸಕಲೇಶಪುರ ತಾಲ್ಲೂಕು ಯಸಳೂರಿನಲ್ಲಿ ವಿದ್ಯುಚ್ಛಕ್ತಿ ಮಂಡಳಿ ಸಬ್ ಸ್ಟೇಷನ್ ಸ್ಥಾಪನೆ.

1836 - ಶ್ರೀ. ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ತಾಲ್ಲೂಕು ಯಸಳೂರಿನಲ್ಲಿ ವಿದ್ಯುಚ್ಛಕ್ತಿ ಮಂಡಳಿ ಸಬ್ ಸ್ಟೇಷನ್ ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆಯೇ,

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಸದರೀ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಮಂಡಳಿಯ ಆಡಳಿತಾತ್ಮಕ ಮಂಜೂರಾತಿ ದೊರೆಯಬೇಕಾಗಿದೆ. ಇದು ದೊರೆತ ನಂತರವೇ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ.

ಸಕಲೇಶಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆ.

1837 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಅಲೂವಳ್ಳಿ ಕಡಗರಹಳ್ಳಿ ಮತ್ತು ಯಡಕುಮೇರಿ ಗ್ರಾಮಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲಾಗಿದೆಯೇ?

ಆ) ಆಗದಿದ್ದಲ್ಲಿ ವಿದ್ಯುತ್ ಒದಗಿಸಲು ಆಗಿರುವ ತೊಂದರೆ ಯಾವುವು?

ಇ) ಈ ತೊಂದರೆ ನಿವಾರಣೆ ಮಾಡಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಇಲ್ಲ.

ಆ) ಈ ಹಿಂದೆ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಯಡಿ ವಿದ್ಯುದ್ದೀಕರಣ ಕಾರ್ಯವನ್ನು ನಿರ್ವಹಿಸುವ ಸಮಯದಲ್ಲಿ ವಿದ್ಯುತ್ ತಂತಿ ಮತ್ತು ಕೆಲವು ಸಾಮಗ್ರಿಗಳ ಕಳ್ಳತನದಿಂದಾಗಿ ವಿದ್ಯುದ್ದೀಕರಣ ಕಾರ್ಯವು ಅಪೂರ್ಣಗೊಂಡಿತು. ಅಲ್ಲದೇ ಈ ಗ್ರಾಮಗಳು ಬೆಟ್ಟಗುಡ್ಡಗಳಿಂದ ಆವೃತವಾಗಿರುವುದರಿಂದ ವಿದ್ಯುದ್ದೀಕರಣ ಕಾರ್ಯವನ್ನು ನಿರ್ವಹಿಸುವುದೂ ಸಹ ಬಹಳ ತ್ರಾಸದಾಯಕ.

ಇ) ವಿದ್ಯುದ್ದೀಕರಣ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು ಒಂದು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದ್ದು, ಇದು ಪರಿಶೀಲನೆಯಲ್ಲಿದೆ. ಈ ಅಂದಾಜುಪಟ್ಟಿಗೆ ಮಂಡಳಿಯ ಮಂಜೂರಾತಿ ದೊರಕಿದ ನಂತರ ಈ ಗ್ರಾಮಗಳ ವಿದ್ಯುದ್ದೀಕರಣ ಬಾಕಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು.

1997 - 98ನೇ ಸಾಲಿನಲ್ಲಿ ವಿದ್ಯುತ್ ಕಳುವು ಮಾಡಿರುವ ಪ್ರಕರಣಗಳು.

1838 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ಕೈಗಾರಿಕೆ, ಕೃಷಿ ಹಾಗೂ ಮನೆ ಬಳಕೆಯಲ್ಲಿ ವಿದ್ಯುತ್ ಕಳವು ಮಾಡಿದ ಪ್ರಕರಣಗಳೆಷ್ಟು?*

ಆ) *ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)*

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) 1997-98ನೇ ಸಾಲಿನಲ್ಲಿ ಕೈಗಾರಿಕೆ, ಕೃಷಿ ಹಾಗೂ ಮನೆ ಬಳಕೆಯಲ್ಲಿ ಪತ್ತೆ ಹಚ್ಚಲ್ಪಟ್ಟ ವಿದ್ಯುತ್ ಕಳವು ಪ್ರಕರಣಗಳ ಸಂಖ್ಯೆ ಅನುಕ್ರಮವಾಗಿ 231, 3 ಮತ್ತು 21.

ಆ) ವಿದ್ಯುತ್ ಕಳವು ಪ್ರಕರಣಗಳಲ್ಲಿ ತನಿಖೆ ಕಾರ್ಯ ಮತ್ತು ಆರೋಪಣಾ ಪತ್ರ ಸಲ್ಲಿಸುವ ಕಾರ್ಯ ಮುನ್ನಡೆಯಲ್ಲಿದೆ. ಕಳುವಿನ ಪ್ರಕರಣಗಳನ್ನು ತಡೆಯಲು ಸಾಮೂಹಿಕ ಧಾಳಿಗಳನ್ನು ವ್ಯವಸ್ಥೆ ಮಾಡಲಾಗಿದ್ದು ಮೋಟರುಗಳಿಗೆ ಕಳವು ನಿರೋಧಕ- (ಟ್ಯಾಂಪರ್ ಪ್ರೂಫ್ ಬಾಕ್ಸ್) ಪೆಟ್ಟಿಗೆಗಳನ್ನು ಅಳವಡಿಸಲಾಗುತ್ತಿದೆ. ಕೆಟ್ಟಿರುವ ಮೋಟರ್‌ಗಳನ್ನು ಬದಲಾಯಿಸುವುದು. ಹೈಟೆನ್ಷನ್ ಹಾಗೂ ಕೈಗಾರಿಕಾ ಉದ್ಯಮಿಗಳಿಗೆ ಹೆಚ್ಚು ನಿಖರತೆ ಮತ್ತು ಟ್ಯಾಂಪರ್ ಪ್ರೂಫ್ ಆದ ಎಲೆಕ್ಟ್ರಾನಿಕ್ ಮೋಟರುಗಳನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿದೆ.

ಇ) ಹೆಚ್ಚು ವಿದ್ಯುತನ್ನು ಉಪಯೋಗಿಸುವ ಸ್ಥಾವರಗಳ ಬಳಕೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಅನುಮಾನ ಬಂದ ಸ್ಥಾವರಗಳನ್ನು ಕೂಡಲೇ ಪರೀಕ್ಷಿಸಿ ಸ್ಥಳದಲ್ಲೇ ತಪ್ಪಿತಸ್ಥರ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಲಾಗುತ್ತಿದೆ